ಪ್ರ-330 (79)

ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀಮತಿ ಎಸ್.ವೀಣಾ ಅಚ್ಚಯ್ಯ ಇವರು ಧಾರ್ಮಿಕ ದತ್ತಿ ಇಲಾಖೆಗೆ ಸೇರಿದ "ಕೊಡಗು ಜಿಲ್ಲೆಯ ಪವಿತ್ರ ಕ್ಷೇತ್ರವಾದ ತಲಕಾವೇರಿಯಲ್ಲಿ ಆಭರಣ ಇರಿಸಲು, ತಕ್ಕರಿಗೆ ಅರ್ಚಕರಿಗೆ ಹಾಗೂ ಭದ್ರತಾ ಸಿಬ್ಬಂದಿಗಳಿಗೆ ಸೂಕ್ತ ಕೊಠಡಿ ನಿರ್ಮಾಣ ಹಾಗೂ ಅನ್ನ ಛತ್ರ ನಿರ್ಮಾಣ ಕಾಮಗಾರಿಗಳು ಕಾರ್ಯಗತಗೊಳ್ಳದೇ ಇರುವುದರಿಂದ ಭಕ್ತರು ಹಾಗೂ ದೇವಾಲಯದ ಸಿಬ್ಬಂದಿಗಳಿಗೆ ನಿರಂತರವಾಗಿ ತೊಂದರೆ ಆಗುತ್ತಿದ್ದು, ಈ ಗಂಭೀರ ಸಮಸ್ಯೆ ಬಗ್ಗೆ ನಿಯಮ 330ರಡಿ ಗಮನ ಸೆಳೆಯುವ ಸೂಚನೆಗೆ ಹಿಂದೂ ಧಾರ್ಮಿಕ ದತ್ತಿ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರ ಹೇಳಿಕೆ:

* * * * *

ಉತ್ತರ :-

ಕೊಡಗು ಜಿಲ್ಲೆ, ಮಡಿಕೇರಿ ತಾಲ್ಲೂಕು, ಭಾಗಮಂಡಲದಲ್ಲಿರುವ ಶ್ರೀ ಭಗಂಡೇಶ್ವರ ದೇವಾಲಯವು ಹಿಂದೂ ಧಾರ್ಮಿಕ ದತ್ತಿ ಇಲಾಖಾ ವ್ಯಾಪ್ತಿಗೊಳಪಡುವ ಪ್ರವರ್ಗ-'ಎ' ಶ್ರೇಣಿಯ ದೇವಾಲಯವಾಗಿರುತ್ತದೆ.

2020-21ನೇ ಸಾಲಿನ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಆಯವ್ಯಯದಲ್ಲಿ ತಲಕಾವೇರಿ ಭಾಗಮಂಡಲ ಅಭಿವೃದ್ಧಿಗಾಗಿ ಆರ್ಥಿಕ ನೆರವಿಗಾಗಿ ರೂ **100.00**ಲಕ್ಷಗಳನ್ನು ಈ ದೇವಾಲಯಕ್ಕೆ ಬಿಡುಗಡೆ ಮಾಡಿದ್ದು, ಸದರಿ ಅನುದಾನಕ್ಕೆ ಅನುಗುಣವಾಗಿ ಶ್ರೀ ಭಗಂಡೇಶ್ವರ, ತಲಕಾವೇರಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ದಿನಾಂಕ:02-11-2020ರ ಸಭೆಯಲ್ಲಿ ಈ ಕೆಳಕಂಡ ಕಾಮಗಾರಿಗಳಿಗೆ ಕ್ರಿಯಾ ಯೋಜನೆಯನ್ನು ರೂಪಿಸಲು ತೀರ್ಮಾನಿಸಲಾಗಿರುತ್ತದೆ.

1. ತಲಕಾವೇರಿಯಲ್ಲಿ ಭಂಡಾರ ಮತ್ತು ಆಭರಣಗಳೊಂದಿಗೆ ವಾಸ್ತವ್ಯವಿರುವ ತಕ್ಕರಿಗೆ ಸುರಕ್ಷತಾ ಹಿತದೃಷ್ಟಿಯಿಂದ ಮೂಲಭೂತ ಸೌಕರ್ಯದೊಂದಿಗೆ ಸುಸಜ್ಜಿತ ಭದ್ರತಾ ಕೊಠಡಿಯ ನಿರ್ಮಾಣ
2. ತಲಕಾವೇರಿಯ ಅರ್ಚಕರಿಗೆ ಪ್ರತಿನಿತ್ಯ ಕರ್ತವ್ಯದ ಬಳಿಕ ವಿಶ್ರಾಂತಿಗಾಗಿ ಹಾಗೂ ಫಲ-ಉಪಹಾರಗಳನ್ನು ಸೇವಿಸಲು ಒಂದು ಕೊಠಡಿ ನಿರ್ಮಾಣ.
3. ವಿಶೇಷ ಸಂದರ್ಭಗಳಲ್ಲಿ ವಿಶೇಷ ಕಾರ್ಯಕ್ರಮಗಳಿಗೆ ಬಂದು ತಂಗಲಿರುವ ತಂತ್ರಿಯವರಿಗೆ ಹಾಗೂ ಅವರ ಸಹಪಾಠಿಯವರಿಗೆ ತಂಗಲು ಒಂದು ಕೊಠಡಿ.
4. ದೇವಾಲಯದ ಆಭರಣಗಳ ಜೊತೆಗೆ ಬರುವ ಭದ್ರತಾ ಸಿಬ್ಬಂದಿ ಹಾಗೂ ಪೊಲೀಸ್ ಸಿಬ್ಬಂದಿಯವರಿಗೆ ಒಂದು ಕೊಠಡಿ ನಿರ್ಮಾಣ
5. ಶಿಥಿಲವಾಗಿರುವ ಕಟ್ಟಡದ ಪಶ್ಚಿಮ ಭಾಗದಲ್ಲಿ ತಡೆಗೋಡೆಯನ್ನು ಹಾಗೂ ಗೋಕುಲಕ್ಕೆ ಒಂದು ಸುಸಜ್ಜಿತ ಕಾಂಪೌಂಡ್ ನಿರ್ಮಾಣ.
6. ಮಹಾದ್ವಾರದಿಂದ ತೀರ್ಥಕೊಳದವರೆಗೆ ಮತ್ತು ಶ್ರೀ ಅಗಸ್ತೇಶ್ವರ ದೇವಾಲಯದ ಗರ್ಭಗುಡಿ ಸುತ್ತಲೂ, ತೀರ್ಥಕೊಳದ ಸುತ್ತಲೂ ಅವಶ್ಯತೆ ಇದ್ದಾಗ ಹಾಗೂ ವಿ.ಐ.ಪಿ ಗ್ಯಾಲರಿಗೆ ರೇಲಿಂಗ್ಸ್, ಕೊಳದಿಂದ ಬಟ್ಟೆ ಬದಲಾಯಿಸಲು ಹೋಗುವ ದಾರಿಗೆ ಹಾಗೂ ಅಶ್ವತ್ಥ ಕಟ್ಟೆಯಿಂದ ಕುಂಡಿಕೆವರೆಗೂ ಗೇಟ್‌ಗಳನ್ನು ಅಳವಡಿಸುವಿಕೆ.

ಈ ಮೇಲ್ಕಂಡ ಕ್ರಿಯಾ ಯೋಜನೆಗೆ ಸಂಬಂಧಿಸಿದಂತೆ ಕೊಡಗು ನಿರ್ಮಿತಿ ಕೇಂದ್ರ, ಮಡಿಕೇರಿ ಇವರಿಂದ ರೂ 1.00ಕೋಟಿ ವೆಚ್ಚದ ಕಾಮಗಾರಿಗಳ ಅಂದಾಜು ಪಟ್ಟಿ ಕ್ರಿಯಾ ಯೋಜನೆಗೆ ಧಾರ್ಮಿಕ ದತ್ತಿ ಆಯುಕ್ತರ ಪತ್ರ ಸಂಖ್ಯೆ:ಸಿಎನ್‌ಆರ್-1/ಸಿಆರ್/23/20-21 ದಿನಾಂಕ: 16-12-2020ರಂದು ಅನುಮತಿ ನೀಡಿದ್ದು, ಅದರಂತೆ ಕ್ರಮ ವಹಿಸಲಾಗುತ್ತಿದೆ.

(ಸಂಖ್ಯೆ: ಕಂಇ 67 ಮುಸಪ್ರ 2021)

(ಕೋಟಾ ಶ್ರೀನಿವಾಸ ಪೂಜಾರಿ)
ಹಿಂದೂ ಧಾರ್ಮಿಕ ಮತ್ತು ಧರ್ಮಾದಾಯ ದತ್ತಿ
ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು.